ಕಥೆ

# ಹಳೆಮನೆ



**ಕರೀಗೌಡ ಬೀಚನಹಳ್ಳಿ**

ಕಲೆ: ವೆಂಕಟ್ರಮಣ ಭಟ್

ಮುಂಜಾವಿನ ಮಬ್ಬುಗತ್ತಲು ಇನ್ನೂ ಕಣ್ಣುಗಳಲ್ಲಿ ಆಡಾಡುತ್ತಿದ್ದಾಗಲೇ ಎದ್ದು ದೀಪ ಹಚ್ಚಿ, ರೂಮಿನಲ್ಲಿ ಓದಿಕೊಳ್ಳುತ್ತಾ, 'ಕಾಲಭೈರವ' ಪದ್ಯವನ್ನು, 'ಏಕೆ ಕುಣಿವೆ ತೂಕ ತಪ್ಪಿ, ಸಾಕು ಕಾಲಭೈರವ; ನಾಕ ಹೋಗಿ ನರಕವಾಯ್ತು, ಸಾಕು ಮಾಡೋ ಸ್ವೈರವ' ಎಂದು ಬಾಯಿಪಾಠ ಮಾಡುತ್ತಾ ಕೂತಿದ್ದ ಮೊಮ್ಮಗ ಮುಕುಂದನನ್ನು ಅವನಜ್ಜಿ ಚಿನ್ನವ್ವ ಕೂಗಿದಳು. ಮುಕುಂದ ದೀಪ ತುಂಬಿ ಓದುತ್ತಿದ್ದ ಕನ್ನಡ ಪುಸ್ತಕವನ್ನು ಮುಚ್ಚಿಟ್ಟು ನಡುಮನೆಯಲ್ಲಿ ನಿಂತಿದ್ದ ಅಜ್ಜಿಯ ಬಳಿಗೆ ಬಂದಾಗ ಬೆಳಕಾಗಿತ್ತು. ಚಿನ್ನವ್ವ, "ನಿನ್ನ ತಾತಾರು ಮನೆಯಲ್ಲಿ ಇದ್ದಾರೋ, ಇಲ್ಲವೋ, ಅಥವಾ ಆಗ್ಲೇ ಎದ್ದು ಹೊರಗೆ ಹೋಗಿದ್ದಾರೋ ಹೋಗಿ ನೋಡು, ಅವರಿಗೆ 'ನಮ್ಮಜ್ಜಿ ಯಾಕೋ ಬರ್‍ರನೆ ತಮಗೆ ಮನಿಗೆ ಬರೋದಿಕ್ಕೆ ಹೇಳಿ ಬಾ ಅಂತ ಕಳಿಸಿದ್ಲು' ಅಂತ ಹೇಳಿ ಬಾ" ಎಂದು ಮೊಮ್ಮಗನಿಗೆ ಹೇಳುತ್ತಿದ್ದಾಗಲೇ, ಎಮ್ಮೆಕಾಳಯ್ಯನೇ ಅಲ್ಲಿಗೆ ಬಂದ.

ಎಮ್ಮೆಕಾಳಯ್ಯ ಬೆಳಿಗ್ಗೆಯೇ ಎದ್ದು ಕೆರೆ ಕಡೆಗೆ ಹೋಗಿ ತನ್ನ ದೈನಂದಿನ ಕರ್ಮಗಳನ್ನು ಮುಗಿಸಿಕೊಂಡು, ರೂಪಾಯಿ ಬಡ್ಡಿಗೆ ಸಾಲಕೊಡುತ್ತಿದ್ದ ತನ್ನ ಅಣ್ಣನ ಮಗ ಚಂದ್ರಪ್ಪನ ಬಳಿ, 'ರೇಷ್ಮೆ ಗೂಡನ್ನು ಮಾರ್ಕೆಟ್ಟಿಗೆ ಹಾಕಿ ಸರ್ಕಾರದಿಂದ ಹಣ ಬಂದಮೇಲೆ ಕೊಡ್ತಿನಿ. ಅಲ್ಲಿವರೆಗು ಸ್ವಲ್ಪ ಕೈ ಹಣ ಕೊಡು' ಎಂದು ಕೇಳಲು ಆತ ಬಂದಿದ್ದ. ಚಿನ್ನವ್ವ ತನ್ನ ಹಿರಿಮೈದ ಎಮ್ಮೆಕಾಳಯ್ಯ ತಾನೇ ಬಂದುದನ್ನು ಕಂಡು, 'ಈಗತಾನೇ ನಾನೇ ನಿಮಗೆ ಹೇಳಿ ಕಳಿಸ್ದೆ ಕರೆಯಲು! ಅಷ್ಟರಲ್ಲಿ ನೀವೇ ಬಂದದ್ದು ಒಳ್ಳೆದಾಯ್ತು' ಎನ್ನುತ್ತಾ, ತನ್ನ ಕಿರಿಮೈದ ಕಜ್ಜಿನಿಂಗಣ್ಣನನ್ನು ಕರೆಯಲು ಮುಕುಂದನನ್ನು ಕಳಿಸಿರುವ ಬಗ್ಗೆ ಅವನಿಗೆ ತಿಳಿಸಿದಳು. ಮುಕುಂದ ತನ್ನ ಚಿಕ್ಕತಾತ ಕಜ್ಜಿನಿಂಗಣ್ಣನ ಮನೆಯ ಹತ್ತಿರ ಓಡಿ ಬಂದು, ಏದುಸಿರು ಬಿಡುತ್ತಾ, ಬಾಗಿಲಲ್ಲಿ ನಿಂತು, 'ತಾತ, ತಾತ' ಎಂದು ಒಂದೇ ಉಸಿರಿಗೆ ಕೂಗಿಕೊಂಡ. ಅವನ ಚಿಕ್ಕತಾತ ಆಕಾಶದಲ್ಲಿ ಮುಂಗಾರು ಮಳೆ ಆರಂಭವಾಗುವ ಸೂಚನೆಗಳು ಕಾಣುತ್ತಿದ್ದುದ್ದರಿಂದ ಮಳೆ ಬಂದರೆ ಹೊಲಕ್ಕೆ ಆರು ಹೂಡಲು ಬೇಕಾಗುತ್ತದೆ ಎಂದು ಹೊಸ ನೇಗಿಲನ್ನು ಇಕ್ಕಿಸಲು ಕೊಟ್ಟಿಗೆಯಲ್ಲಿ ಗಬ್ಬಳಿ ಮರದ ತುಂಡನ್ನು ಹುಡುಕತೊಡಗಿದ್ದನು. ಬಂದ ಮುಕುಂದ ಅವನಿಗೆ, 'ತಾತಾ ಅಜ್ಜಿ ನಿಮ್ಮನ್ನು ಬರೋದಿಕ್ಕೆ ಹೇಳಿದ್ದಾರೆ. ಬೇಗ ಬನ್ನಿ. ಎಮ್ಮೆಕಾಳಯ್ಯ